International Journal of Kannada Research 2022; 8(1): 34-36

International Journal of Kannada Research
www.kannadajournal.com

**ISSN: 2454–5813**
IJKR 2022; 8(1): 34-36
© 2022 IJKR
www.kannadajournal.com
Received: 19-11-2021
Accepted: 21-12-2021

**Dr. Roopa MP**
ಕನ್ನಡ ಸಹ ಪ್ರಾಧ್ಯಾಪಕರು.
ಸ.ಪ್ರ.ದ.ಮಹಿಳಾ ಕಾಲೇಜು,
ರಾಮನಗರ

**Corresponding Author:**
**Dr. Roopa MP**
ಕನ್ನಡ ಸಹ ಪ್ರಾಧ್ಯಾಪಕರು.
ಸ.ಪ್ರ.ದ.ಮಹಿಳಾ ಕಾಲೇಜು,
ರಾಮನಗರ

# ಕುವೆಂಪು ನಾಟಕಗಳಲ್ಲಿ ಅಭಿವ್ಯಕ್ತಿಗೊಂಡಿರುವ ದಾರ್ಶನಿಕತೆ

**Dr. Roopa MP**

ಕುವೆಂಪುರವರು ಈ ಆಧುನಿಕ ಯುಗ ಕಂಡ ಒಬ್ಬ ಮಹಾನ್ ದಾರ್ಶನಿಕ. ರವಿ ಕಾಣದ್ದನ್ನು ಕವಿ ಕಂಡ ಎಂಬಂತೆ ಕುವೆಂಪು ಕಂಡರಿಸಿದ ಜೀವನವಿಲ್ಲ.

> "ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ
> ಯಧಾಸ್ಮೈ ರೋಚತೆ ವಿಶ್ವಂ ತದೇದಂ ಪರಿವರ್ತತೆ"

ಕಾವ್ಯಗಳಲ್ಲಿ ಕವಿಯ ಸ್ಥಾನವನ್ನು ಕುರಿತು ಹೇಳುವ ಈ ಮಾತು ಅಕ್ಷರಶಃ ಕುವೆಂಪುರವರಿಗೆ ಸಲ್ಲುತ್ತದೆ. ತಮ್ಮ ಕೃತಿಗಳಲ್ಲಿ ಬದುಕಿನ ಹಲವು ಆಯಾಮಗಳನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಸಾಮಾಜಿಕ ದೃಷ್ಟಿ, ಸರ್ವೋದಯ, ಸಮರ್ಪಣಾ ಭಾವದಿಂದ ವ್ಯಕ್ತಿಗಳ ಆಂತರ್ಯದಲ್ಲಿ ಹುದುಗಿರುವ ಭಾವಗಳನ್ನು ಹೊರಹಾಕಿದ ಮಹಾಕವಿ ಕುವೆಂಪು. ಐತಿಹಾಸಿಕ ಪೌರಾಣಿಕ ಘಟನಾವಳಿಗಳನ್ನು ಹಲವು ದೃಷ್ಟಿಕೋನಗಳಿಂದ ತೂಗಿ ನೋಡಿದ ಕವಿ ಕುವೆಂಪು.

ಅಂಬೇಡ್ಕರ್ ಹೇಳುವಂತೆ 'ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ಗುಣದಿಂದ ಅಳೆಯಬೇಕೇ ಹೊರತು ಜಾತಿಯಿಂದಲ್ಲ" ಎಂಬಂತೆ ಕುವೆಂಪು ಶೂದ್ರರಾಗಿ ಜನಿಸಿದರೂ ಜಾತಿಯನ್ನು ಮೀರಿದ ವ್ಯಕ್ತಿತ್ವ ಅವರದು. ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿದ್ದ ಸಂಸ್ಕೃತವನ್ನು ಕಲಿತುಕೊಂಡು ಪಾಶ್ಚತ್ಯ ಭಾಷೆಯಾದ ಇಂಗ್ಲೀಷ್ ನೊಂದಿಗೆ ಸಾಮರಸ್ಯ ಬೆಳೆಸಿಕೊಂಡು ಎರಡೂ ಭಾಷೆಗಳಲ್ಲಿ ಹೊರಹೊಮ್ಮಿದ ಕಾವ್ಯಶಕ್ತಿಯನ್ನು ಸಿದ್ದಿಸಿಕೊಂಡವರು ಕುವೆಂಪು. ಎರಡೂ ಸಾಹಿತ್ಯ ಪರಂಪರೆಗಳ ಆಳವಾದ ಹಿನ್ನಲೆಯಿದ್ದ ಕುವೆಂಪು ಈ ಯುಗ ಕಂಡ ಮಹಾನ್ ಸಾಧಕ.

ಸಂಸ್ಕೃತ ಮತ್ತು ಇಂಗ್ಲೀಷ್ ಸಾಹಿತ್ಯ ಪರಂಪರೆಗಳ ಒಡನಾಟವೇ ಅವರ ನಾಟಕಗಳ ವಸ್ತು ವೈವಿದ್ಯತೆಯಲ್ಲಿ ಒಡಮೂಡಿದೆ. 'ಯಮನ ಸೋಲು', 'ಶ್ಮಶಾನ ಕುರುಕ್ಷೇತ್ರ', 'ಬೆರಳ್‌ಗೆ ಕೊರಳ್' ಮಹಾಭಾರತದ ಹಿನ್ನೆಲೆಯಲ್ಲಿ ಮೂಡಿಬಂದ ನಾಟಕಗಳಾದರೆ, 'ಶೂದ್ರತಪಸ್ವಿ', 'ವಾಲ್ಮೀಕಿಭಾಗ್ಯ' ರಾಮಾಯಣ ಮಹಾಕಾವ್ಯದಿಂದಾಯ್ದ ವಸ್ತುಗಳಾಗಿವೆ. 'ಬಿರುಗಾಳಿ' ಮತ್ತು 'ರಕ್ತಾಕ್ಷಿ' ನಾಟಕಗಳು ಷೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ಮತ್ತು 'ಹ್ಯಾಂಲೆಟ್'ಗಳ ರೂಪಾಂತರವಾಗಿವೆ.

ಕುವೆಂಪುರವರ ಹಲವು ನಾಟಕಗಳಲ್ಲಿ ಮುಖ್ಯವಾದ ಐದು ನಾಟಕಗಳನ್ನು ವರ್ತಮಾನ ಸಂದರ್ಭದಲ್ಲಿಟ್ಟು ಅನುಸಂಧಾನ ಮಾಡಲು ಇಚ್ಛಿಸುತ್ತೇನೆ. 'ಬೆರಳ್‌ಗೆ ಕೊರಳ್', 'ಶ್ಮಶಾನ ಕುರುಕ್ಷೇತ್ರ', 'ಮಹಾರಾತ್ರಿ' 'ಶೂದ್ರ ತಪಸ್ವಿ ಮತ್ತು 'ಜಲಗಾರ'. ಗುರು ಮತ್ತು ಶಿಷ್ಯರಿಬ್ಬರ ನಡುವಣ ವಾಗ್ವಾದ ಮತ್ತು ಸಾಮರಸ್ಯಗಳ ಚಿತ್ರಣ 'ಬೆರಳ್‌ಗೆ ಕೊರಳ್' ನಾಟಕದಲ್ಲಿ ಕ್ಷತ್ರಿಯೊತ್ತಮರ ಕೈಕೆಳಗೆ ಸಿಲುಕಿ ಸ್ವತಂತ್ರ ನಿರ್ಧಾರವನ್ನು ಕೈಗೊಳ್ಳಲಾರದೆ ಅವರ ಕೈಗೊಂಬೆಯಾಗಿ ವರ್ತಿಸುವ ವ್ಯಕ್ತಿಯಾಗಿ ಗುರು ದ್ರೋಣಾಚಾರ್ಯರು ಚಿತ್ರಿತವಾಗಿದ್ದಾರೆ.

> 'ಅರಸುಮಕ್ಕಳ್ಗೊವಜುಗೆಯ್ವುದುಂ
> ಸಿಡಿಮದ್ದನರೆವುದುಂ ಎರಡುವೊಂದೆ'

ಎಂಬಲ್ಲಿ ಅವರ ಮನಸ್ಸಿನ ತೊಳಲಾಟವನ್ನು ಕಾಣಬಹುದಾಗಿದೆ. ದ್ರುಪದ ರಾಜ ಅವಮಾನ ಮಾಡಿದನೆಂಬ ಈರ್ಷೆಯಿಂದ ಮೂಡಿದ ಹಗೆತನವು ಅಂತಿಮವಾಗಿ ತನ್ನನ್ನೇ ಸುರುಳಿ ಸುತ್ತಿ ಏನೂ ಅರಿಯದ ಮುಗ್ಧ ಬಾಲಕನ ಬೆರಳ ಬಲಿಗೆ ತಳ್ಳುತ್ತಿದೆಯಲ್ಲ ಎಂಬ ಪಶ್ಚಾತ್ತಾಪವು ದ್ರೋಣರನ್ನು ಕಾಡುತ್ತಿದೆ.

'ನನ್ನಹಂಕಾರದಾ ಛಲಮೆ ಮರಿಯಿಕ್ಕಿದುದು
ಪಾರ್ಥನ ಅಹಂಕಾರದೀ ಕ್ರೂರ ಈರ್ಷ್ಯೆಯಂ' ಎಂದು
ಮರುಗುತ್ತಾರೆ.

ಅರ್ಜುನನ ಮತ್ಸರಕ್ಕೆ ಬಲಿಯಾದ ಬೇಡ ಬಾಲಕನಾಗಿ ಏಕಲವ್ಯ ಚಿತ್ರಿತನಾಗಿದ್ದಾನೆ. ಇಬ್ಬರೂ ದ್ರೋಣಾಚಾರ್ಯರ ಶಿಷ್ಯರಾಗಿ ಬಿಲ್ವಿದ್ಯೆಯನ್ನು ಕಲಿಯಲು ಗುರುವನ್ನು ಆಶ್ರಯಿಸಿದರಾದರೂ ಇಬ್ಬರ ಮನೋಭಾವಗಳಲ್ಲಿರುವ ಅಂತರವು ಇಲ್ಲಿ ವ್ಯಕ್ತವಾಗುತ್ತದೆ. ಬಿಲ್ವಿದ್ಯೆಯಲ್ಲಿ ಪರಿಣತರಾಗಬೇಕೆಂಬುದು ಇಬ್ಬರ ಇಚ್ಛೆಯಾದರೂ ಅವರಿಟ್ಟ ಹೆಜ್ಜೆ ಮಾತ್ರ ಭಿನ್ನ. ದ್ರೋಣರಿಂದ ಪ್ರತ್ಯಕ್ಷವಾಗಿ ವಿದ್ಯೆ ಕಲಿತ ಕ್ಷತ್ರಿಯ ಕುಮಾರ ಪಾರ್ಥನ ನಡೆನುಡಿಗಳಲ್ಲಿ ಅಹಂಕಾರ, ಮತ್ಸರಗಳು ವ್ಯಕ್ತವಾದರೆ, ಪರೋಕ್ಷವಾಗಿ ಗುರುವೆಂದು ಭಾವಿಸಿ ವಿದ್ಯೆ ಕಲಿತ ಬೇಡ ಬಾಲಕ ಏಕಲವ್ಯನಲ್ಲಿ ವಿನಯತೆ ಮತ್ತು ಶ್ರದ್ಧೆಗಳು ಎದ್ದುಕಾಣುತ್ತದೆ. ದ್ರೋಣರೇ ಭಾವಿಸುವಂತೆ

ಬಿಂಕಕ್ಕೆ ಡೊಳ್ಳೀವುದದು ವಿದ್ಯೆಯೇ? ಅವಿದ್ಯೆ!
ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ
ಮಿಕ್ಕುದೆಲ್ಲಂ ಅವಿದ್ಯೆ!

ತಾನೊಬ್ಬನೇ ಬಿಲ್ವಿದ್ಯೆಯಲ್ಲಿ ಅಪ್ರತಿಮನಾಗಬೇಕೆಂಬ ಅಹಂಕಾರದಿಂದ ಕಲಿತ ಅರ್ಜುನನ ವಿದ್ಯೆ ಅದು ಅವಿದ್ಯೆ. ಕಾಡಿನ ಸಾಧು ಪ್ರಾಣಿಗಳನ್ನು ಕ್ರೂರಮೃಗಗಳಿಂದ ರಕ್ಷಿಸಬೇಕೆಂಬ ಹಂಬಲದಿಂದ, ಶ್ರದ್ಧೆಯಿಂದ ಕಲಿತ ವಿದ್ಯೆ ಅದು ಸದ್ವಿದ್ಯೆ ಎಂದು ದ್ರೋಣರು ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಏಕಲವ್ಯನನ್ನು ಏನಾದರೊಂದು ತಪ್ಪಿನಲ್ಲಿ ಸಿಲುಕಿಸುವ ಸಲುವಾಗಿ ಆಕಾಶದಲ್ಲಿ ಹಾರುತ್ತಿರುವ ಹಕ್ಕಿಗೆ ಬಾಣ ಬಿಡಲು ಹೇಳಿದಾಗ, ಏಕಲವ್ಯ ಅದನ್ನು ಅಧರ್ಮವೆಂದು ನಿರಾಕರಿಸುತ್ತಾನೆ.

'ಅಪರಾಧಮಿಲ್ಲದಾ ಸಾಧುವಂ ಕೊಲಲ್ಕಲ್ತು
ಆಚಾರ್ಯ ಆ ವಿದ್ಯೆಯಂ ನೀನಿತ್ತುದೆನಗೆ'

ಎಂಬಲ್ಲಿ ಏಕಲವ್ಯನ ಸದ್ವಿದ್ಯೆಯ ಸಾಕ್ಷಾತ್ಕಾರವಾಗುತ್ತದೆ. ನಿಜವಾದ ಗುರುಭಕ್ತಿ ಮತ್ತು ಶ್ರದ್ಧೆಯ ಪ್ರತಿನಿಧಿಯಾಗಿ ಏಕಲವ್ಯ ನಮಗಿಲ್ಲಿ ಗೋಚರವಾಗುತ್ತಾನೆ.

'ಶ್ಮಶಾನ ಕುರುಕ್ಷೇತ್ರ' ನಾಟಕವು ಹದಿನೆಂಟು ದಿನಗಳ ಯುದ್ಧಾನಂತರ ಇಡೀ ಕುರುಕ್ಷೇತ್ರ ರಣಾಂಗಣವು ಶ್ಮಶಾನವಾಗಿ ಯದ್ಧದಿಂದ ಸರ್ವಸ್ವವೂ ಹಾನಿಗೊಳಗಾಗುವುದನ್ನು ಚಿತ್ರಿಸುತ್ತದೆ. ನಾಶದಲ್ಲಿಯೇ ನವಯುಗವು ಕುಡಿಯೊಡೆಯುತ್ತದೆಂಬ ಆಶಾಭಾವವಿರುವುದಾದರೂ ಆಂತರ್ಯದಲ್ಲಿ ಯುದ್ಧಪ್ರಣೀತ ದುಷ್ಪರಿಣಾಮದ ಬಗೆಗೆ ಅತೀವವಾದ ಶೋಕವು ಮಡುಗಟ್ಟಿದೆ.

ಕೌರವ ಮತ್ತು ಪಾಂಡವ ಪಕ್ಷಗಳೆರಡರಲ್ಲಿಯೂ ಬಂಧುಬಾಂದವರನ್ನು ಕಳೆದುಕೊಂಡ ದುಃಖಿಗಳ ಸಂಕಟವಿದೆ. ಕರ್ಣನನ್ನು ಕಳೆದುಕೊಂಡ ತಾಯಿ ಕುಂತಿಯ ಮತ್ತು ಗೆಳೆಯ ಸುಯೋಧನದ ಆಕ್ರಂದನ, ಸುಯೋಧನನ್ನು ಕಳೆದುಕೊಂಡೆವೆಂದು ಪರಿತಪಿಸುವ ಧೃತರಾಷ್ಟ್ರ ಗಾಂಧಾರಿ ಮತ್ತು ಅಶ್ವತ್ಥಾಮರ ದುಃಖ ಒಂದೆಡೆಯಾದರೆ, ಅಭಿಮನ್ಯು ಮತ್ತು ಘಟೋತ್ಕಚರನು ಕಳೆದುಕೊಂಡ ಭೀಮಾರ್ಜುನರ ವ್ಯಥೆಯು ಮತ್ತೊಂದೆಡೆಯಾಗಿದೆ. ಸೈನ್ಯದಲ್ಲಿ ಮಡಿದ ಸೈನಿಕರ ಬಂಧುಬಾಂದವರ ದುಃಖ ಮೇರೆ ಮೀರಿದೆ. ಇಲ್ಲಿ ಎಲ್ಲರೂ ಸಮಾನ ದುಃಖಿಗಳಾಗಿದ್ದಾರೆ.

ಕುರುಕ್ಷೇತ್ರದಲ್ಲಿ ಮಗನನ್ನು ಕಳೆದುಕೊಂಡ ಮುದುಕಿ ಮತ್ತು ಗಂಡನನ್ನು ಕಳೆದುಕೊಂಡು ಮಗುವನ್ನೆತ್ತಿಕೊಂಡು ಬಂದ ತಾಯಿಯರು ಹೇಳುವಂತೆ

'ನಮ್ಮವೋಲಿಹ ಬಡಜನಗಳೆಲ್ಲ ಮಂಕುಗಳಮ್ಮಾ
ಪಾಂಡವರ್ ಕೌರವರ್ ನೆಲಕೆ ಪೊಯ್ದಾಡಿದರೆ ನಮ್ಮ ಮಕ್ಕಳ್
ಅವರಿವರಂ ಕೆಳೆಗೊಂಡು ನಿಂತು ಹೆಮ್ಮಗೆ ಬಡಿದಾಡಿ ಮುಡಿಯವರ್'

ರಾಜರುಗಳ ಯುದ್ಧದಾಹಕ್ಕೆ ಸಾಮಾನ್ಯರು ಬಲಿಯಾಗುವುದು ಮತ್ತು ಧರ್ಮದ ಹೆಸರಿನಲ್ಲಿ ಬಡಜನಗಳ ಕೊಲೆಯಾಗುವುದರ ಬಗೆಗೆ ಆಕ್ರೋಶವು ವ್ಯಕ್ತವಾಗಿದೆ. ಯುದ್ಧಭೂಮಿಯಲ್ಲಿ ಅಲೆಯುವ ಮರುಳುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಹೆಣಗಳ ರಾಶಿಯನ್ನು ಕಂಡು,

ಏನ್ ಮುಚ್ಚರಮೋ? ಏನ್ ಕಾಳಗದ ಪುರ್ಚೊ
ಈ ಕೀಳ್ಮಾನಿಸರ್ಗೆ ಇವರನಾನುಂ ಪೇಸುವೆನ್!

ಎಂಬಲ್ಲಿ ಮನುಷ್ಯರ ದ್ವೇಷಾಸೂಯೆಗಳು, ಸ್ವಾರ್ಥ ಪರ ಮತ್ಸರಗಳೇ ಅವರ ದುರ್ಗತಿಗೆ ನಿಮಿತ್ತವೆಂಬುದನ್ನು ಹೇಳುತ್ತವೆ. ಯುದ್ಧಾನಂತರದಲ್ಲಿ ಧರ್ಮರಾಯನು ಹೀಗೆ ಹೇಳುತ್ತಾನೆ.

ಪಗೆಯುಂ, ಕೆಳೆಯುಂ
ಪೇರಾಸೆ ಮಚ್ಚರಂ, ಹೋರಾಟಮಿವೆಲ್ಲಂ
ಸ್ವರ್ಗದ ಸುನೀಲ ಔದಾರ್ಯದೊಳ್ ಮುಳುಗಿ
ತಲ್ಲೀನಮಾದಪುವು ತುತ್ತತುದಿಗೆ!

ಯುದ್ಧ ಪೂರ್ವದಲ್ಲಿ ಕೌರವ–ಪಾಂಡವರಲ್ಲಿದ್ದ ಪರಸ್ಪರ ಕೋಪ ದ್ವೇಷ, ಅಸೂಯೆ, ಮತ್ಸರ, ಸ್ವಾರ್ಥ ಮೊದಲಾದ ಗುಣಗಳು ಯುದ್ಧಾಂತ್ಯದಲ್ಲಿ ಅವಸಾನ ಹೊಂದಿ ಕೊನೆಗೆ ವಿಯೋಗವೊಂದೆ ಸ್ಥಾಯಿಯಾಗಿ ಉಳಿಯುವುದನ್ನು ನಾಟಕ ದರ್ಶಿಸುತ್ತದೆ.

ಲೋಕಹಿತಾರ್ಥಕ್ಕಾಗಿ ಜಗತ್ತಿನ ಅಂಧಕಾರವನ್ನು ತೊಡೆಯುವ ಮಹದಾಸೆಯಿಂದ ತನ್ನ ಸಾಮ್ರಾಜ್ಯ ಬಂಧು–ಬಾಂಧವರೆಲ್ಲರನ್ನು ತೊರೆದು ಎಲ್ಲಾ ಮೋಹಪಾಶಗಳಿಂದ ಬಿಡುಗಡೆಗೊಂಡು ವಿಶ್ವಮುಖಿಯಾಗಿ ತೆರಳಲು ಸಿದ್ಧಾರ್ಥನು ನಿಶ್ಚಯಿಸಿ ಹೊರಟ ರಾತ್ರಿಯೇ 'ಮಹಾರಾತ್ರಿ' ನಾಟಕವಾಗಿದೆ.

ದೇಹಕ್ಕೆ ವ್ಯಾಪಿಸುವ ರೋಗರುಜಿನಗಳು, ಸಾವು–ನೋವುಗಳು ಮುದಿತನಗಳು ಇವೆಲ್ಲವನ್ನು ಕಂಡ ಸಿದ್ಧಾರ್ಥ ಇವುಗಳ ಹಿಂದಿರುವ ಮರ್ಮವನ್ನರಿಯಲು ಅರಮನೆಯನ್ನು ತೊರೆಯುವ ನಿರ್ಧಾರ ಮಾಡುತ್ತಾನೆ. ನಾಟಕದ ಆರಂಭದಲ್ಲಿ ಯಕ್ಷನು ಹೀಗೆ ಹೇಳುತ್ತಾನೆ.

'ಯಜ್ಞಯಾಗಾದಿಗಳ ಹಿಂಸೆಯಲಿ ಬೆಂದು ಕೃತ್ರಿಮದ ವೈದಿಕರ
ದೌಷ್ಟ್ಯದೊಳು ನೊಂದು, ಒಣವೇದ ಪಂಡಿತರ ವಾದದೊಳು
ಮುಳು ಮುಳುಗಿ ಗೋಳಿಡುವ ಭಾರತೀಯ ಪುಣ್ಯಗಗನದ
ಪೂರ್ವದೊಳು ನೋಡು ಹರ್ಷದ ಅರುಣೋದಯವು
ಶೋಭಿಸುವುದೆಂತು!

ಇಡೀ ಸಮಾಜವೇ ಜಾತೀಯತೆಯಲ್ಲಿ ಮುಳುಗಿ, ವೈದಿಕ ಪರಂಪರೆಯ ಅಂಧಾನುಕರಣೆಗೆ ಸಿಲುಕಿ ನಲುಗುತ್ತಿರುವ

ಸಾಮಾನ್ಯರನ್ನು ಉದ್ಧರಿಸಲು ಸಿದ್ದಾರ್ಥನು ಬುದ್ಧನಾಗಲೇಬೇಕಾದ ಅನಿವಾರ್ಯತೆಯನ್ನು ಇದು ಸಾರುತ್ತದೆ. ಹೊರಡಲು ನಿಶ್ಚಯಿಸಿದ ದಿನದಂದು ಎದುರಾದ ರಾಹುಲನ ಜನನ ಆತನನ್ನು ಹಿಂದಕ್ಕೆಳೆಯುವ ಮೋಹಪಾಶವಾದರೂ ಅವೆಲ್ಲವನ್ನು ನಿರ್ಲಿಪ್ತಭಾವದಿಂದ ಸ್ವೀಕರಿಸುತ್ತಾನೆ.

"ತಂದೆಯೊಲಿದೀಯುವ ಮುತ್ತಲ್ಲಿವಿದು ಕಂದ
ಸಂನ್ಯಾಸಿಯೀಯುತಿಹ ನಿಷ್ಕಾಮ ಚುಂಬನ
ಪರಮಾತ್ಮೆ ನೀಯುತಿಹ ಮಂಗಳದ ಮುತ್ತು।

ಸಿದ್ಧಾರ್ಥನ ಮನವು ಸಂಪೂರ್ಣವಾಗಿ ಯೋಗಿತ್ವದ ಕಡೆಗೆ ವಾಲಿರುವುದನ್ನು ನೋಡಬಹುದು. ಜಗತ್ತಿನ ಮೌಢ್ಯಾಂಧಕಾರವನ್ನು ತೊಲಗಿಸಿ ಬೆಳಕ ನೀಡಲು ಹೊರಟ ಸಿದ್ಧಾರ್ಥ ಅದಕ್ಕೆ ಪೂರ್ವಭಾವಿಯಾಗಿ ಸಂಸಾರ, ಸಾಮಾಜ್ಯ ಸಂಪತ್ತು ಬಂಧುಬಾಂಧವರೆಂಬ ಮೋಹಪಾಶಗಳಿಂದ ಬಿಡಿಸಿಕೊಂಡು ಬೆಳಕಿನೆಡೆಗೆ ಸಾಗುವ ಚಿತ್ರಣವು 'ಮಹಾರಾತ್ರಿ' ಯಲ್ಲಿ ಸುಂದರ ರೂಪಕವಾಗಿ ಚಿತ್ರತವಾಗಿದೆ. ಜಗತ್ತನ್ನು ಕತ್ತಲಿನಿಂದ ಬೆಳಕಿಗೆ ನಿಶ್ಚಯಿಸಿದ ಸಿದ್ಧಾರ್ಥ ಸ್ವತಃ ತಾನು ಕತ್ತಲಿನಿಂದ ಬೆಳಕಿನೆಡೆಗೆ ಸಾಗುತ್ತಿರುವ ದೃಶ್ಯವು ನಾಟಕದಲ್ಲಿ "ಮಹಾರಾತ್ರಿ" ಯಾಗಿ ಚಿತ್ರಿತವಾಗಿದೆ. ಸಿದ್ಧಾರ್ಥನ ಮನೋಭಿಲಾಷೆ ಧೃಡಸಂಕಲ್ಪವಾಗಿ ಪರಿವರ್ತನೆ ಹೊಂದಿ' ಮಹಾರಾತ್ರಿ' ಯಂದು ಸಾಕಾರಗೊಳ್ಳುತ್ತದೆ.
'ಶೂದ್ರ ತಪಸ್ವಿ' ನಾಟಕವು ಶೂದ್ರನಾದ ಶಂಭುಕನು ತಪಸಿದ್ಧಿಯನ್ನು ಪಡೆಯಲು ಸಮರ್ಥನು ಎಂಬ ನಿಲುವಿನಿಂದ ಹೊರಹೊಮ್ಮಿದೆ. ವರ್ಣವ್ಯವಸ್ಥೆಯಲ್ಲಿ ಅತ್ಯಂತ ಹಿರಿಯ ಸ್ಥಾನವಿರುವುದು ವೈಧಿಕರಿಗೆ, ದೈವಧ್ಯಾನ ಪ್ರಣೀತ ತಪಸ್ಸಾಚರಣೆ ವೈದಿಕರಿಗೆ ಮಾತ್ರ ಮೀಸಲೆಂದು ನಂಬಿದ್ದ ಬ್ರಾಹ್ಮಣ ' ನಾಯಪಾಲ್ಗೆಣೆ ಶೂದ್ರನ ತಪಂ' ಎಂದು ಮೂದಲಿಸುತ್ತಾನೆ. ತನ್ನ ಮಗನ ಸಾವಿಗೆ ಶೂದ್ರ ಶಂಭೂಕನ ಈ ತಪಸ್ಸೆ ಕಾರಣವೆಂದು ದ್ವಿಜೋತ್ತಮ ಆರೋಪಿಸುತ್ತಾನೆ. ಸ್ವತಃ ಶ್ರೀರಾಮನೇ ಶೂದ್ರ ಮತ್ತು ವೈದಿಕರನ್ನು ಮುಖಾಮುಖಿಯಾಗಿಸುವ ಮೂಲಕ 'ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ನೆರಂಬೇಕೆ?' ಎನ್ನುತ್ತಾ ವೈದಿಕನ ಮನದ ಮೌಢ್ಯವನ್ನು ದೂರ ಮಾಡುತ್ತಾನೆ. ತಪವೆಂಬುದು ದ್ವಿಜರ ಸ್ವತ್ತಲ್ಲ ಯಾರೂ ಯಾವ ಕಾರ್ಯವನ್ನಾದರೂ ಕೈಗೊಳ್ಳಲು ಈ ಜಗದೊಳಗೆ ಸಮರ್ಥರು. ಮನುಷ್ಯನ ಸಾಧನೆಯನ್ನು ಅವನ ಸಾಮರ್ಥ್ಯದಿಂದ ಅಳೆಯಬೇಕೆ ಹೊರತು, ಅವನ ಜಾತಿಯಿಂದಲ್ಲಾ, ಸ್ವತಃ ಕುವೆಂಪು ತಮ್ಮ ಬಾಳಲ್ಲಿ ಕಂಡುಕೊಂಡ ಸತ್ಯದರ್ಶನವು ಇದಾಗಿದೆ.
ಶೂದ್ರನಾದ ಶಂಭೂಕನ ತಪಶ್ಯಕ್ತಿಯನ್ನು ಸ್ವತಃ ಶ್ರೀರಾಮನೇ ಮೆಚ್ಚಿ ವಂದಿಸುವಂತೆ, ಜಾತಿಯಿಂದ ಕೀಳಾಗಿ ವೃತ್ತಿಯಲ್ಲಿ ಜಲಗಾರನಾದರೂ ಅವನ ಕಾಯಕ ನಿಷ್ಠೆಯನ್ನು ಮೆಚ್ಚಿ ಸಾಕ್ಷಾತ್ ಶಿವನೇ ಪ್ರತ್ಯಕ್ಷವಾಗುವುದನ್ನು 'ಜಲಗಾರ' ನಾಟಕವು ತೋರಿಸುತ್ತದೆ. ಕಾಯಕವೇ ಕೈಲಾಸ ಎಂಬ ಬಸವಣ್ಣರ ವಾಣಿಯಂತೆ ಕುವೆಂಪು ಕೂಡ ಜಾತಿಗಿಂತ ದುಡಿಮೆಗೆ ಹೆಚ್ಚು ಒತ್ತು ನೀಡಿದ್ದಾರೆ. ಜಾತಿಯಿಂದ ಜಲಗಾರ ಕೀಳಾದರೂ ಅವನ ಕಾಯಕ ನಿಷ್ಠೆಗೆ ಮೆಚ್ಚಿ ಸಾಕ್ಷತ್ ಶಿವನೇ ಸಾಕ್ಷಾತ್ಕಾರಗೊಳ್ಳುತ್ತಾನೆ. ಜಲಗಾರನ ವೃತ್ತಿ ಪ್ರೇಮವನ್ನು ಮೆಚ್ಚಿದ ಶಿವನು 'ಊರ ತೋಟಿಯು ನೀನು; ಜಗದ ತೋಟಿಯು ನಾನು' ಎಂದು ಹೇಳುವ ಮೂಲಕ ಕಾಯಕಕ್ಕೆ ಉನ್ನತ ಸ್ಥಾನವನ್ನು ನೀಡುತ್ತಾನೆ.
ಈ ಎರಡು ನಾಟಕಗಳ ಮೂಲಕ ಕುವೆಂಪು ವರ್ಣ ವ್ಯವಸ್ಥೆಯ ವಿರುದ್ಧವಾಗಿ ಮನುಷ್ಯ ಪ್ರೀತಿಯನ್ನು ಸಾರಿದ್ದಾರೆ. ಜಾತಿಯಿಂದ ಯಾರೂ ಮೇಲಲ್ಲ, ಯಾರೂ ಕೀಳಲ್ಲ ಹಾಗೆಯೇ ವೃತ್ತಿಯಿಂದ ಯಾವುದೂ ಮೇಲಲ್ಲ, ಯಾವುದೂ ಕನಿಷ್ಠವಲ್ಲ ಎಂಬ ಕಾಣ್ಕೆಯನ್ನು ನೀಡುತ್ತಾರೆ.
ವೇದ, ಉಪನಿಷತ್, ಮನುಸ್ಮೃತಿಗಳಿಂದ ತುಂಬಿರುವ ಭಾರತದಲ್ಲಿ ವರ್ಣ ವ್ಯವಸ್ಥೆಯು ಹಾಸುಹೊಕ್ಕಾಗಿದೆ. ಬ್ರಾಹ್ಮಣ–ಶೂದ್ರ, ಮಡಿ–ಮೈಲಿಗೆ, ಮೇಲು–ಕೀಳು,ಬಡವ–ಬಲ್ಲಿದ ಎಂಬ ಬೇದ ಭಾವಗಳೆ ತುಂಬಿರುವ ಸಮಾಜದಲ್ಲಿ ಈ ಡೊಂಕನ್ನು ತಿದ್ದಿ ಸರಿ ದಾರಿಯನ್ನು ತೋರುವ ಪ್ರಯತ್ನ ಈ ನಾಟಕಗಳಲ್ಲಿ ವ್ಯಕ್ತವಾಗಿದೆ. ಸರ್ವರೂ ಸಮಾನರು, ಸರ್ವರ ಸರ್ವೋಧಯದಿಂದಲೇ ಮನುಕುಲದ ಏಳ್ಗೆ ಸಾಧ್ಯವೆಂದು ಕುವೆಂಪು ಬಲವಾಗಿ ನಂಬಿದ್ದರು.
ಕ್ಷತ್ರಿಯನಾದ ಅರ್ಜುನನ ಅಹಂಕಾರದ ಮುಂದೆ ವಿದ್ಯಾ ವಿನಯತೆಯನ್ನು ಮೆರೆದ ಬೇಡಬಾಲಕ ಏಕಲವ್ಯ, ಬ್ರಾಹ್ಮಣರಿಗಿಂತಲೂ ಮಿಗಿಲಾದ ತಪಶ್ಯಕ್ತಿಯನ್ನು ಹೊಂದಿದ ಶೂದ್ರ ಶಂಭೂಕ, ದೇವಾಲಯದ ಪೂಜೆಗಿಂತಲೂ ಮಿಗಿಲಾದ ಕಾಯಕ ಪ್ರೇಮವನ್ನು ಮೆರೆದ ಜಲಗಾರ, ಇವರೇ ಕುವೆಂಪು ನಾಟಕದ ನಾಯಕರಾಗಿದ್ದಾರೆ. ವೈದಿಕ ಪರಂಪರೆಯ ಅಂಧಕಾರವನ್ನು ನೀಗಿಸಿ ಬೆಳಕನ್ನು ನೀಡಹೊರಟ ಬುದ್ಧ ನಾಟಕದ ವಸ್ತುವಾಗುತ್ತಾನೆ. ಕ್ಷತ್ರಿಯರ ಈರ್ಷೆಗೆ ಬಲಿಯಾದ ಬಡಜನರ ನೋವಿನ ಚಿತ್ರಣ ಶ್ಮಶಾನ ಕುರುಕ್ಷೇತ್ರದ ವಸ್ತುವಾಗುತ್ತದೆ.
ಕುವೆಂಪುರವರ ನಾಟಕಗಳು ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ವಸ್ತುಗಳನ್ನು ಆಧರಿಸಿದ್ದರೂ ಅವನ್ನು ಪ್ರಸ್ತುತ ಕಾಲಮಾನದ ಮೂಸೆಯಲ್ಲಿಟ್ಟು ಹೊಸದರ್ಶನವನ್ನು ಕಾಣಬಯಸುತ್ತಾರೆ. ಮಹಾಕಾವ್ಯಗಳ ಸಣ್ಣ–ಸಣ್ಣ ಪ್ರಸಂಗಗಳನ್ನು ಹಾಯ್ದುಕೊಂಡು ಅವನ್ನು ವರ್ತಮಾನದಲ್ಲಿಟ್ಟು ನೋಡುವ ಬಗೆಯು ಈ ನಾಟಕಗಳಲ್ಲಿದೆ. ವಸ್ತುವಿನ ಆಯ್ಕೆ ಮತ್ತು ವಿಸ್ತಾರ ಕಿರಿದ್ದಾಗಿದ್ದರೂ ಅವು ತೋರುವ ದರ್ಶನ ಮಾತ್ರ ಎಲ್ಲಾ ಕಾಲಕ್ಕೂ ಸಲ್ಲುವಂತಹದಾಗಿದೆ.
ಕುವೆಂಪು ಜೀವಿಸಿದ್ದ ಕಾಲದಲ್ಲಿ ಅಂದಿನ ಯಾವ ಮೇಲ್ವರ್ಗದ ಸಾಹಿತಿಗಳಿಗಿಂತಲೂ ಮಿಗಿಲಾಗಿ, ಸರಿಸಮಾನರಾಗಿ ಕೃತಿ ರಚಿಸಿ, ಕನ್ನಡ ಸಾಹಿತ್ಯ ಪರಂಪರೆಯಲ್ಲೇ ಏನೂ ಭಾರತೀಯ ಸಾಹಿತ್ಯ ಪರಂಪರೆಯಲ್ಲಿಯೇ ಇಷ್ಟೊಂದು ಬಹುಮುಖ ಪ್ರತಿಭೆಯುಳ್ಳ ಕವಿ ಮತ್ತೊಬ್ಬ ಸಿಗಲಾರರು. ತನ್ನ ವಿಶಾಲ ಓದಿನ ಅನುಭವದಿಂದ ತಾನು ಕಂಡುಕೊಂಡ ಸತ್ಯವನ್ನು ಯಾವುದೇ ಅಂಜಿಕೆಯಿಲ್ಲದೆ ಕೃತಿಗಳಲ್ಲಿ ಹೊರತಂದ ಧೀಮಂತ ಕವಿ ಕುವೆಂಪು.

**ಪರಾಮರ್ಶನ ಗ್ರಂಥಗಳು.**

1. ಬೆರಳ್‌ಗೆಕೊರಳ್, ಕುವೆಂಪು ಉದಯರವಿ ಪ್ರಕಾಶನ ಮೈಸೂರು. 1947.
2. ಜಲಗಾರ, ಕುವೆಂಪು 1928, ಉದಯರವಿ ಪ್ರಕಾಶನ ಮೈಸೂರು.
3. ಶೂದ್ರ ತಪಸ್ವಿ, ಕುವೆಂಪು ಉದಯರವಿ ಪ್ರಕಾಶನ ಮೈಸೂರು. 1944.
4. ಮಹಾರಾತ್ರಿ, ಕುವೆಂಪು ಉದಯರವಿ ಪ್ರಕಾಶನ ಮೈಸೂರು. 1931.
5. ಶ್ಮಶಾನ ಕುರುಕ್ಷೇತ್ರ, ಕುವೆಂಪು ಉದಯರವಿ ಪ್ರಕಾಶನ ಮೈಸೂರು. 1931.
6. ಕುವೆಂಪು ಕೃತಿ ವಿಮರ್ಶೆ, ಅರವಿಂದ ಮಾಲಗತ್ತಿ (ಸಂ) ಮಾನಸ ಗಂಗೋತ್ರಿ ಮೈಸೂರು. 2006.